

ಶ್ರೀ ಸರಸ್ವತಿ ವಿದ್ಯಾಮಂದಿರ ಮತ್ತು
ಮಂಗಳ ವಿದ್ಯಾಕೇಂದ್ರ, ಮಾಗಡಿ



ಶ್ರೀ ವೀಣಾ ಮಕ್ಕಳ ಮಂದಿರ, ತ್ಯಾಮಗೊಂಡ್ಲು



ಶ್ರೀ ಮಂಗಳ ವಿದ್ಯಾಮಂದಿರ, ದೊಡ್ಡಬಳ್ಳಾಪುರ



ಶ್ರೀ ಗಾಯತ್ರಿ ವಿದ್ಯಾಮಂದಿರ, ಹೊಸಕೋಟೆ



ಶ್ರೀ ಶಾರದಾ ವಿದ್ಯಾಮಂದಿರ, ವರ್ತೂರು



ಶ್ರೀ ಹಂಸವಾಹಿನಿ ಮಕ್ಕಳ ಮಂದಿರ, ಕನಕಪುರ



ಮಂಗಳ ವಿದ್ಯಾಮಂದಿರ, ಯಲಹಂಕ



ಶ್ರೀ ಭಾರತಿ ವಿದ್ಯಾನಿಕೇತನ, ಅತ್ತಿಬೆಲೆ

Cover Page Last

# ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ)

ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ.

www.srimangala.org    Email: srimangala.bng@gmail.com

## ವಾರ್ಷಿಕ ವರದಿ 2021-22

ವಿದ್ಯಯಾಽಮೃತಮಶ್ನುತೇ।

ನಂ. 20, 'ಎ' ಸೆಕ್ಟರ್, ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಯಲಹಂಕ ನ್ಯೂಟೌನ್,
ಬೆಂಗಳೂರು-64

Cover Page First

## ಶ್ರೀ ಮಂಗಳ ಶಿಕ್ಷಣ ಸಮಿತಿಯು 1982-83 ರಲ್ಲಿ ಈ ಕೆಳಕಂಡ ಧ್ಯೇಯೋದ್ದೇಶಗಳೊಂದಿಗೆ ಪ್ರಾರಂಭವಾಯಿತು.

* ಭಾರತೀಯ ಪದ್ಧತಿಯ ಶಿಕ್ಷಣವನ್ನು ಪ್ರಚಾರ ಮಾಡುವುದು ಮತ್ತು ಅನುಷ್ಠಾನಕ್ಕೆ ತರುವುದು.
* ಪೂರ್ವ ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢಶಾಲೆ ಮತ್ತು ಅಧ್ಯಾಪಕರ ತರಬೇತಿ ಕೇಂದ್ರಗಳು ಹಾಗು ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು.
* ಮಕ್ಕಳಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಬೆಳಕಿಗೆ ತರಲು ಅವಶ್ಯಕವಾದ ಶಿಕ್ಷಣವನ್ನು ನೀಡುವುದು.
* ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ ವಿಚಾರಗಳ ಪ್ರಕಟಣೆಗಳನ್ನು ಹೊರತರುವುದು.
* ಮಕ್ಕಳಲ್ಲಿ ರಾಷ್ಟ್ರಾಭಿಮಾನವನ್ನು ಬೆಳೆಸಿ ರಾಷ್ಟ್ರದ ಯೋಗ್ಯ ನಾಗರೀಕರನ್ನಾಗಿ ಮಾಡುವುದು.
* ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ ವಿಷಯದ ಮೇಲೆ ವಿಚಾರ ಸಂಕೀರ್ಣ ಮತ್ತು ಚರ್ಚೆಗಳನ್ನು ನಡೆಸುವುದು.
* ಸಂಸ್ಥೆಯ ಧ್ಯೇಯ ಸಾಧನೆಗೆ ಅವಶ್ಯಕವಾದ ಕಾರ್ಯಕ್ರಮ ರೂಪಿಸಿ ಅದನ್ನು ಕಾರ್ಯಗತ ಮಾಡುವುದು.
* ಸಂಸ್ಥೆಯ ಧ್ಯೇಯಕ್ಕೆ ಅನುಗುಣವಾದ ವಿದ್ಯಾಸಂಸ್ಥೆಗಳನ್ನು ವಹಿಸಿಕೊಟ್ಟಲ್ಲಿ ಅವುಗಳನ್ನು ನಡೆಸುವುದು.

## ಶ್ರೀ ಮಂಗಳ ಶಿಕ್ಷಣ ಸಮಿತಿ ನಡೆಸುತ್ತಿರುವ ಶಾಲೆಗಳು

### ಪೂರ್ವ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು

1. ಶ್ರೀ ಸರಸ್ವತಿ ವಿದ್ಯಾ ಮಂದಿರ ಮತ್ತು ಮಂಗಳ ವಿದ್ಯಾಕೇಂದ್ರ, ಮಾಗಡಿ, ರಾಮನಗರ ಜಿಲ್ಲೆ.
2. ಶ್ರೀ ವೀಣಾ ಮಕ್ಕಳ ಮಂದಿರ, ತ್ಯಾಮಗೊಂಡ್ಲು, ನೆಲಮಂಗಲ ತಾ, ಬೆಂ.ಗ್ರಾ.
3. ಶ್ರೀ ಮಂಗಳ ವಿದ್ಯಾಮಂದಿರ, ದೊಡ್ಡಬಳ್ಳಾಪುರ, ಬೆಂ. ಗ್ರಾ. ಜಿಲ್ಲೆ.
4. ಶ್ರೀ ಗಾಯತ್ರಿ ವಿದ್ಯಾಮಂದಿರ, ಹೊಸಕೋಟೆ, ಬೆಂ. ಗ್ರಾ. ಜಿಲ್ಲೆ..
5. ಶ್ರೀ ಶಾರದ ವಿದ್ಯಾಮಂದಿರ, ವರ್ತೂರು, ಬೆಂ. ನಗರ ಜಿಲ್ಲೆ.





6. ಶ್ರೀ ಹಂಸವಾಹಿನಿ ಮಕ್ಕಳ ಮಂದಿರ, ಕನಕಪುರ, ರಾಮನಗರ ಜಿಲ್ಲೆ.
7. ಮಂಗಳ ವಿದ್ಯಾ ಮಂದಿರ, ಯಲಹಂಕ ನ್ಯೂಟೌನ್, ಬೆಂ. ನಗರ ಜಿಲ್ಲೆ.
8. ಶ್ರೀ ಭಾರತಿ ವಿದ್ಯಾನಿಕೇತನ, ಅತ್ತಿಬೆಲೆ, ಆನೇಕಲ್ ತಾ, ಬೆಂ. ನಗರ ಜಿಲ್ಲೆ.

### ಪ್ರೌಢ ಶಾಲೆಗಳು

1. ಶ್ರೀ ಸರಸ್ವತಿ ವಿದ್ಯಾ ಮಂದಿರ, ಮಾಗಡಿ, ರಾಮನಗರ ಜಿಲ್ಲೆ.
2. ಶ್ರೀ ಶಾರದಾ ವಿದ್ಯಾಮಂದಿರ, ವರ್ತೂರು, ಬೆಂ. ನಗರ ಜಿಲ್ಲೆ.
3. ಮಂಗಳ ವಿದ್ಯಾ ಮಂದಿರ, ಯಲಹಂಕ, ಬೆಂ. ನಗರ ಜಿಲ್ಲೆ.

## ಶ್ರೀ ಮಂಗಳ ಶಿಕ್ಷಣ ಸಮಿತಿ ಸಹಯೋಗದಲ್ಲಿ ನಡೆಯುತ್ತಿರುವ ಶಾಲೆಗಳು

### ಪೂರ್ವ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು

1. ಜ್ಞಾನವಾಹಿನಿ ವಿದ್ಯಾಕೇಂದ್ರ, ನೆಲಮಂಗಲ ಬೆಂ. ಗ್ರಾ. ಜಿಲ್ಲೆ.
2. ಸ್ವಾಮಿ ವಿವೇಕಾನಂದ ವಿದ್ಯಾಕೇಂದ್ರ, ಹೊಸಕೋಟೆ, ಬೆಂ. ಗ್ರಾ. ಜಿಲ್ಲೆ.
3. ಹೆಂಕ್ ಬ್ರೂನ ಸ್ವಾಮಿ ವಿವೇಕಾನಂದ ರೌಂಡ್‌ಟೇಬಲ್ ಸ್ಕೂಲ್, ದೊಡ್ಡಗಟ್ಟಿಗನಬ್ಬೆ, ಹೊಸಕೋಟೆ ತಾ, ಬೆಂ. ಗ್ರಾ. ಜಿಲ್ಲೆ.
4. ಶ್ರೀ ಗುರೂಜಿ ವಿದ್ಯಾಮಂದಿರ, ಆನೇಕಲ್, ಬೆಂ. ನಗರ ಜಿಲ್ಲೆ.
5. ಸೆಂಟ್‌ಪಾಲ್ ಕಾನ್ವೆಂಟ್, ಕೆ.ಪಿ. ಅಗ್ರಹಾರ, ಬೆಂಗಳೂರು.
6. ಶ್ರೀ ವಿವೇಕಾನಂದ ವಿದ್ಯಾನಿಕೇತನ, ನೆರಳೂರು, ಬೆಂ. ನಗರ ಜಿಲ್ಲೆ.

### ಪ್ರೌಢ ಶಾಲೆಗಳು

1. ಜ್ಞಾನವಾಹಿನಿ ವಿದ್ಯಾಕೇಂದ್ರ, ನೆಲಮಂಗಲ, ಬೆಂ. ಗ್ರಾ. ಜಿಲ್ಲೆ.
2. ಸ್ವಾಮಿ ವಿವೇಕಾನಂದ ವಿದ್ಯಾಕೇಂದ್ರ, ಹೊಸಕೋಟೆ, ಬೆಂ. ಗ್ರಾ. ಜಿಲ್ಲೆ.
3. ಹೆಂಕ್ ಬ್ರೂನ ಸ್ವಾಮಿ ವಿವೇಕಾನಂದ ರೌಂಡ್‌ಟೇಬಲ್ ಸ್ಕೂಲ್, ದೊಡ್ಡಗಟ್ಟಿಗನಬ್ಬೆ, ಹೊಸಕೋಟೆ ತಾಲ್ಲೂಕು, ಬೆಂ. ಗ್ರಾ. ಜಿಲ್ಲೆ.
4. ಶ್ರೀ ಗುರೂಜಿ ವಿದ್ಯಾಮಂದಿರ, ಆನೇಕಲ್, ಬೆಂ. ನಗರ ಜಿಲ್ಲೆ.
5. ಶ್ರೀ ವಿವೇಕಾನಂದ ವಿದ್ಯಾನಿಕೇತನ, ನೆರಳೂರು, ಬೆಂ. ನಗರ ಜಿಲ್ಲೆ.
6. ಎಂ.ಇ.ಎಸ್. ಪ್ರೌಢಶಾಲೆ, ಮರಳವಾಡಿ, ಕನಕಪುರ ತಾ., ರಾಮನಗರ ಜಿಲ್ಲೆ.
7. ಮಾರುತಿ ಪ್ರೌಢಶಾಲೆ, ರಾಜಘಟ್ಟ, ದೊಡ್ಡಬಳ್ಳಾಪುರ ತಾ., ಬೆಂ. ಗ್ರಾ. ಜಿಲ್ಲೆ.

## ಘೋಷ್ ಶಿಬಿರ

ದಿನಾಂಕ 11-10-2021 ರಿಂದ 20-10-2021 ರ ವರೆಗೆ ಶ್ರೀ ಶಾರದಾ ವಿದ್ಯಾ ಮಂದಿರ, ವರ್ತೂರು ಶಾಲೆಯಲ್ಲಿ ಘೋಷ್ ಶಿಬಿರವನ್ನು ನಡೆಸಲಾಯಿತು. ಈ ಶಿಬಿರದಲ್ಲಿ 11 ಹೆಣ್ಣು ಮಕ್ಕಳು, 16 ಗಂಡು ಮಕ್ಕಳು ಸೇರಿ ಒಟ್ಟು 27 ಮಕ್ಕಳು ಇದರ ಸದುಪಯೋಗವನ್ನು ಪಡೆದುಕೊಂಡರು.





ಘೋಷ್ ಶಿಬಿರದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು





## ನವರಾತ್ರಿ ಪ್ರಯುಕ್ತ ಗೊಂಬೆಗಳ ಪ್ರದರ್ಶನ ಸ್ಪರ್ಧೆ

ನವರಾತ್ರಿ ಪ್ರಯುಕ್ತ ಶ್ರೀ ಮಂಗಳ ಶಿಕ್ಷಣ ಸಮಿತಿಯಿಂದ ಮಕ್ಕಳಿಗೆ ಮನೆಯಲ್ಲಿಯೇ ಗೊಂಬೆಗಳ ಪ್ರದರ್ಶನ ಸ್ಪರ್ಧೆಯನ್ನು ಏರ್ಪಡಿಸಲಾಯಿತು. 8 ಶಾಲೆಗಳಿಂದ ಒಟ್ಟು 18 ವಿದ್ಯಾರ್ಥಿಗಳು ಭಾಗವಹಿಸಿದ್ದರು.





ಗೊಂಬೆಗಳ ಪ್ರದರ್ಶನದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು

## ಟ್ಯಾಬ್ ವಿತರಣಾ ಕಾರ್ಯಕ್ರಮ

ದಿನಾಂಕ 01–11–2021 ರಂದು ಯುವ ಬ್ರಿಗೇಡ್ ಸಂಸ್ಥೆಯ ವತಿಯಿಂದ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ ರಾಜ್ಯಾದ್ಯಂತ ಟ್ಯಾಬ್‌ಗಳನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಬಿ.ಸಿ. ನಾಗೇಶ್‌ರವರಿಂದ ವಿದ್ಯಾರ್ಥಿಗಳಿಗೆ ವಿತರಿಸುವ ಕಾರ್ಯಕ್ರಮವನ್ನು ಬೆಂಗಳೂರಿನ ಕೆ.ಎಲ್.ಇ. ಕಾಲೇಜ್‌ನಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದ ವಿದ್ಯಾಕೇಂದ್ರ, ಹೊಸಕೋಟೆ ಶಾಲಾ ಮಕ್ಕಳಿಗೂ ಸಹ ಟ್ಯಾಬ್‌ಗಳನ್ನು ನೀಡಲಾಯಿತು.







ಶ್ರೀಮತಿ ಸುಧಾ ಮತ್ತು ವಿದ್ಯಾರ್ಥಿಗಳು ಟ್ಯಾಬ್‌ಗಳನ್ನು ಪಡೆಯುತ್ತಿರುವುದು



ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ)

## ಜಿಲ್ಲಾ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಗಳು

ದಿನಾಂಕ 21–12–2021 ರಂದು ಶ್ರೀ ಮಂಗಳ ಶಿಕ್ಷಣ ಸಮಿತಿ ವತಿಯಿಂದ ವಿವಿಧ ಸ್ಪರ್ಧೆಗಳನ್ನು ಆನ್‌ಲೈನ್ ತಂತ್ರಾಂಶದ ಮೂಲಕ ಏರ್ಪಡಿಸಲಾಯಿತು. ಮಂಗಳ ವಿದ್ಯಾ ಮಂದಿರ, ಯಲಹಂಕ ಶಾಲೆ ದೇಶಭಕ್ತಿ ಗೀತೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ಹಾಗೂ ಭಗವದ್ಗೀತೆ ಸ್ಪರ್ಧೆಯಲ್ಲಿ ತೃತೀಯ ಸ್ಥಾನವನ್ನು ಪಡೆದುಕೊಂಡಿತು. ಶ್ರೀ ವಿವೇಕಾನಂದ ವಿದ್ಯಾಕೇಂದ್ರ, ಹೊಸಕೋಟೆ ಶಾಲೆ ಭಗವದ್ಗೀತೆ ಸ್ಪರ್ಧೆಯಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ, ದೇಶಭಕ್ತಿ ಗೀತೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ, ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿತು. ಶ್ರೀ ವೀಣಾ ಮಕ್ಕಳ ಮಂದಿರ ತ್ಯಾಮಗೊಂಡ್ಲು ಶಾಲೆ ದೇಶಭಕ್ತಿ ಗೀತೆ ಸ್ಪರ್ಧೆಯಲ್ಲಿ ತೃತೀಯ ಸ್ಥಾನವನ್ನು ಪಡೆದುಕೊಂಡಿತು. ಶ್ರೀ ಸರಸ್ವತಿ ವಿದ್ಯಾ ಮಂದಿರ, ಮಾಗಡಿ ಶಾಲೆ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ಶ್ರೀ ಶಾರದಾ ವಿದ್ಯಾ ಮಂದಿರ, ವರ್ತೂರು ಶಾಲೆ ಪ್ರಬಂಧ ಸ್ಪರ್ಧೆಯಲ್ಲಿ ತೃತೀಯ ಸ್ಥಾನವನ್ನು ಪಡೆದುಕೊಂಡಿತು. 8 ಶಾಲೆಗಳಿಂದ ಒಟ್ಟು 53 ವಿದ್ಯಾರ್ಥಿಗಳು ಭಾಗವಹಿಸಿದ್ದರು.







ಆನ್‌ಲೈನ್ ತಂತ್ರಾಂಶದ ಮೂಲಕ ನಡೆಸಿದ ಸಾಂಸ್ಕೃತಿಕ ಕಾರ್ಯಕ್ರಮ

## ಸ್ವರ್ಗೀಯ ಅಜಿತ್‌ಕುಮಾರ್ ರವರ ಸ್ಮರಣಾರ್ಥ ಸೇವಾದಿನ ಕಾರ್ಯಕ್ರಮ

ಸ್ವರ್ಗೀಯ ಅಜಿತ್‌ಕುಮಾರ್‌ರವರ ಸ್ಮರಣಾರ್ಥ ಶ್ರೀ ಮಂಗಳ ಶಿಕ್ಷಣ ಸಮಿತಿಯ ಎಲ್ಲಾ ಶಾಲೆಗಳಲ್ಲಿಯೂ ಸೇವಾದಿನ ಕಾರ್ಯಕ್ರಮವನ್ನು ಆಚರಿಸಲಾಯಿತು.



ಶ್ರೀ ಸರಸ್ವತಿ ವಿದ್ಯಾ ಮಂದಿರ, ಮಾಗಡಿ



ಶ್ರೀ ವೀಣಾ ಮಕ್ಕಳ ಮಂದಿರ, ತ್ಯಾಮಗೊಂಡ್ಲು








ಶ್ರೀ ಮಂಗಳ ವಿದ್ಯಾ ಮಂದಿರ, ದೊಡ್ಡಬಳ್ಳಾಪುರ




ಶ್ರೀ ಗಾಯತ್ರಿ ವಿದ್ಯಾ ಮಂದಿರ, ವರ್ತೂರು




ಶ್ರೀ ಹಂಸವಾಹಿನಿ ಮಕ್ಕಳ ಮಂದಿರ, ಕನಕಪುರ




ಮಂಗಳ ವಿದ್ಯಾ ಮಂದಿರ, ಯಲಹಂಕ



ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ)




ಸೆಂಟ್‌ಪಾಲ್ ಕಾನ್ವೆಂಟ್, ಕೆ.ಪಿ. ಅಗ್ರಹಾರ, ಬೆಂಗಳೂರು




ಹೆಂಕ್‌ಬ್ರೂನ ಸ್ವಾಮಿ ವಿವೇಕಾನಂದ ರೌಂಡ್ ಟೇಬಲ್, ದೊಡ್ಡಗಟ್ಟಿಗನಬ್ಬೆ ಹೊಸಕೋಟೆ

## ಸರ್ವ ಸದಸ್ಯರ ಸಭೆ

ದಿನಾಂಕ 30-12-2021 ರಂದು ಶ್ರೀ ಮಂಗಳ ಶಿಕ್ಷಣ ಸಮಿತಿಯ ಗೌರವಾನ್ವಿತ ಅಧ್ಯಕ್ಷರಾದ ಶ್ರೀ ಮಂಜುನಾಥ ವೈ.ಕೆ. ರವರ ಅಧ್ಯಕ್ಷತೆಯಲ್ಲಿ ಮಂಗಳ ವಿದ್ಯಾ ಕೇಂದ್ರ ಯಲಹಂಕ ಶಾಲೆಯಲ್ಲಿ ಸರ್ವ ಸದಸ್ಯರ ಸಭೆಯನ್ನು ನಡೆಸಲಾಯಿತು.



ಶ್ರೀ ಮಂಗಳ ಶಿಕ್ಷಣ ಸಮಿತಿಯ ಪದಾಧಿಕಾರಿಗಳು



ವಾರ್ಷಿಕ ವರದಿ ಪುಸ್ತಕ ಬಿಡುಗಡೆ ಸಮಾರಂಭ





## 73ನೇ ಗಣರಾಜ್ಯೋತ್ಸವ ಕಾರ್ಯಕ್ರಮ

ದಿನಾಂಕ 26-01-2022 ರಂದು 73ನೇ ಗಣರಾಜ್ಯೋತ್ಸವದ ಪ್ರಯುಕ್ತ ಶ್ರೀ ಮಂಗಳ ಶಿಕ್ಷಣ ಸಮಿತಿಯ ಜಿಲ್ಲಾಧ್ಯಕ್ಷರಾದ ಶ್ರೀ ಮಂಜುನಾಥ್ ವೈ.ಕೆ. ಹಾಗೂ ಸದಸ್ಯರು ಶಾಲೆಗಳಿಗೆ ಪ್ರವಾಸ ಕೈಗೊಂಡು ಆಯಾ ಶಾಲೆಗಳಲ್ಲಿ ಗಣರಾಜ್ಯೋತ್ಸವ ದಿನಾಚರಣೆಯನ್ನು ಆಚರಿಸಲಾಯಿತು.



73ನೇ ಗಣರಾಜ್ಯೋತ್ಸವದಂದು ದೊಡ್ಡಬಳ್ಳಾಪುರ ಶಾಲೆಯಲ್ಲಿ ಶ್ರೀ ಸುಬ್ರಹ್ಮಣ್ಯಂ ರವರ ಉಪಸ್ಥಿತಿ



ಶ್ರೀ ಸತೀಶ್ ಕೆ.ಎನ್. ರವರು ವರ್ತೂರು ಶಾಲಾ ಮಕ್ಕಳಿಗೆ ಬಹುಮಾನ ವಿತರಿಸುತ್ತಿರುವುದು



ಶ್ರೀ ಹೆಚ್.ಎನ್. ಶೇಷ ರವರಿಂದ ಹೊಸಕೋಟೆ ಶಾಲೆಯಲ್ಲಿ ಧ್ವಜಾರೋಹಣ



73ನೇ ಗಣರಾಜ್ಯೋತ್ಸವದಂದು ಯಲಹಂಕ ಶಾಲೆಯಲ್ಲಿ
ಶ್ರೀ ರಮೇಶ್ ರವರ ಉಪಸ್ಥಿತಿ









ಸ್ವಾಮಿ ವಿವೇಕಾನಂದ ವಿದ್ಯಾ ಕೇಂದ್ರ, ಹೊಸಕೋಟೆ ಹಾಗು ದೊಡ್ಡಗಟ್ಟಿಗನಬ್ಬೆ ಶಾಲೆಯಲ್ಲಿ
ಅಧ್ಯಕ್ಷರಾದ ಶ್ರೀ ವೈ.ಕೆ. ಮಂಜುನಾಥ್‌ರವರಿಂದ ಧ್ವಜಾರೋಹಣ

## ವಿದ್ಯಾರ್ಥಿಗಳಿಗೆ ಅಭಿನಂದನೆಗಳು

ಶ್ರೀ ಸರಸ್ವತಿ ವಿದ್ಯಾ ಮಂದಿರ ಪ್ರೌಢಶಾಲೆಯ ವಿದ್ಯಾರ್ಥಿಯಾದ ಪ್ರವೀಣ್ ಪಾಂಡಿಚೆರಿಯಲ್ಲಿ ನಡೆದ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ದ್ವಿತೀಯ ಸ್ಥಾನದೊಂದಿಗೆ ಬೆಳ್ಳಿಯ ಪದಕವನ್ನು ಪಡೆದುಕೊಂಡಿದ್ದಾನೆ. ಈ ವಿದ್ಯಾರ್ಥಿಗೆ ಶ್ರೀ ಮಂಗಳ ಶಿಕ್ಷಣ ಸಮಿತಿಯ ಪರವಾಗಿ ಅಭಿನಂದನೆಗಳು.



### ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಅಗತ್ಯವಿದೆ

**ಮಾಗಡಿ:** ತಾಲ್ಲೂಕಿನಲ್ಲಿ ಸಾಕಷ್ಟು ಮಂದಿ ಪ್ರತಿಭಾನ್ವಿತ ಕ್ರೀಡಾಪಟುಗಳಿದ್ದು ಅವರ ಸಾಧನೆಯ ಅನುಸಾರವಾಗಿ ಪ್ರೋತ್ಸಾಹಿಸುವ ಅಗತ್ಯವಿದೆ ಎಂದು ಶಾಸಕ ಎ.ಮಂಜುನಾಥ್ ಹೇಳಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಸರಸ್ವತಿ ವಿದ್ಯಾಮಂದಿರ ಪ್ರೌಢಶಾಲೆಯ ವಿದ್ಯಾರ್ಥಿ ಪ್ರವೀಣ್ ಬಾಕ್ಸಿಂಗ್ ಚಾಂಪಿಯನ್ ಶಿಪ್ನಲ್ಲಿ ರಾಜ್ಯವನ್ನು ಪ್ರತಿನಿಧಿಸಿ ರಾಷ್ಟ್ರೀಯ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದು ಬೆಳ್ಳಿಪದಕ ಪಡೆದಿರುವ ಹಿನ್ನೆಲೆಯಲ್ಲಿ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು ತಾಲ್ಲೂಕಿನಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ನಮ್ಮ ತಾಲ್ಲೂಕಿನ ಪ್ರತಿಭಾನ್ವಿತ ವಿದ್ಯಾರ್ಥಿಗಳಿದ್ದಾರೆ.ಜೊತೆಗೆ ನಾನಾ ವಿಭಾಗದಲ್ಲಿ ಸ್ಪರ್ಧಿಸಿ ತಮ್ಮ ಅಗಾದ ಪ್ರತಿಭೆಯ ಮೂಲಕ ಸಾಧನೆಗೈಯು ವಿದ್ಯಾರ್ಥಿಗಳಿದ್ದಾರೆ.ಅವರ ಸಾಧನೆಯನ್ನು ಗುರುತಿಸಿ ಪ್ರೋತ್ಸಾಹಿಸಿದರೆ ಮತ್ತಷ್ಟು ಸಾಧನೆ ಮಾಡುತ್ತಾರೆ. ರಾಷ್ಟ್ರೀಯ ಮಟ್ಟದ ಬಾಕ್ಸಿಂಗ್ ಚಾಂಪಿಯನ್ ಶಿಪ್ ನಲ್ಲಿ ಭಾಗವಹಿಸಿ ಬೆಳ್ಳಿಪದಕ ಗಳಿಸಿರುವ ಪ್ರವೀಣ್ ರವರು ತಾಲ್ಲೂಕಿನ ಕೀರ್ತಿಯನ್ನು ರಾಷ್ಟ್ರೀಯ ಮಟ್ಟದಲ್ಲಿ ಪಸರಿಸಿರುವುದು ಹೆಮ್ಮೆಯ ಸಂಗತಿಯಾಗಿದೆ.ಪ್ರವೀಣ್ ಅವರಿಗೆ ಎಲ್ಲಾ ರೀತಿಯ ಸಹಕಾರ ನೀಡಲು ನಾವು ಸಿದ್ದರಿರುವುದಾಗಿ ಮಂಜುನಾಥ್ ತಿಳಿಸಿದರು.

ಸರಸ್ವತಿ ವಿದ್ಯಾಮಂದಿರ ಪ್ರೌಢಶಾಲೆಯ ದೈಹಿಕ ಶಿಕ್ಷಕ ಹೊಸಪೇಟೆ ಮುನಿರಾಜು ಮಾತನಾಡಿ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್ ಪ್ರವೀಣರವರು ಪಟ್ಟಣದ ಜ್ಯೋತಿನಗರದ ವೆಂಕಟೇಶರವರ ಮಗನಾಗಿದ್ದು ನಮ್ಮ ಶಾಲೆಯಲ್ಲಿ ಉತ್ತಮ ಕ್ರೀಡಾಪಟುವಾಗಿದ್ದಾರೆ.ಇವರ ತರಬೇತುದಾರರಾದ ವಿದ್ಯಾನಗರದ ಜಿ.ಮೂರ್ತಿಯವರ ಮಾರ್ಗದರ್ಶನದಲ್ಲಿ ತರಬೇತಿ ಪಡೆದು ಇಂದು ರಾಷ್ಟ್ರೀಯ ಮಟ್ಟದ ಬಾಕ್ಸಿಂಗ್ ಚಾಂಪಿಯನ್ ಶಿಪ್ಪಿನಲ್ಲಿ ಬೆಳ್ಳಿಪದಕ ಗೆದ್ದಿರುವುದು ತಾಲ್ಲೂಕಿನ ಪ್ರತಿಯೊಬ್ಬರೂ ಹೆಮ್ಮೆಪಡುವ ವಿಷಯವಾಗಿದೆ.ಇವರ ಈ ಸಾಧನೆ ಹೀಗೆ ಮುಂದುವರೆದು ತಾಲ್ಲೂಕಿನ ಕೀರ್ತಿಯನ್ನು ಮತ್ತಷ್ಟು ಇಮ್ಮಡಿಗೊಳಿಸಲು ಶ್ರಮಿಸಲಿ ಎಂದು ಮುನಿರಾಜು ತಿಳಿಸಿದರು.

ಪುರಸಭಾದ್ಯಕ್ಷೆ ವಿಜಯರೂಪೇಶ್.ಎಪಿಎಂಸಿ ನಿರ್ದೇಶಕ ಕೆಂಪಸಾಗರ ಮಂಜುನಾಥ್.ಪುರಸಭೆ ಉಪಾಧ್ಯಕ್ಷ ರೆಹಮ್ಮತ್.ಸದಸ್ಯ ಕೆ.ವಿ.ಬಾಲರಘು.ತಾಪಂ ಮಾಜಿ ಅದ್ಯಕ್ಷೆ ಅರುಂಧತಿ ಚಿಕ್ಕಣ್ಣ.ಬಿಡದಿ ಮಂಜುನಾಥ್.ತಗ್ಗೀಕುಪ್ಪೆ ರಾಮಯ್ಯ. ಸೇರಿದಂತೆ ಮತ್ತಿತರಿದ್ದರು.

"ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್ ಪ್ರವೀಣರವರು ಪಟ್ಟಣದ ಜ್ಯೋತಿ ನಗರದ ವೆಂಕಟೇಶರವರ ಮಗನಾಗಿದ್ದು ನಮ್ಮ ಶಾಲೆಯಲ್ಲಿ ಉತ್ತಮ ಕ್ರೀಡಾಪಟುವಾಗಿದ್ದಾರೆ. ಇವರ ತರಬೇತುದಾರರಾದ ವಿದ್ಯಾನಗರದ ಜಿ.ಮೂರ್ತಿಯವರ ಮಾರ್ಗದರ್ಶನದಲ್ಲಿ ತರಬೇತಿ ಪಡೆದು ಇಂದು ರಾಷ್ಟ್ರೀಯ ಮಟ್ಟದ ಬಾಕ್ಸಿಂಗ್ ಚಾಂಪಿಯನ್ ಶಿಪ್ಪಿನಲ್ಲಿ ಬೆಳ್ಳಿಪದಕ ಗೆದ್ದಿರುವುದು ತಾಲ್ಲೂಕಿನ ಪ್ರತಿಯೊಬ್ಬರೂ ಹೆಮ್ಮೆಪಡುವ ವಿಷಯವಾಗಿದೆ.ಇವರ ಈ ಸಾಧನೆ ಹೀಗೆ ಮುಂದುವರೆದು ತಾಲ್ಲೂಕಿನ ಕೀರ್ತಿಯನ್ನು ಮತ್ತಷ್ಟು ಇಮ್ಮಡಿಗೊಳಿಸಲು ಶ್ರಮಿಸಲಿ."

ಪತ್ರಿಕಾ ವರದಿ



ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ವಿಜೇತನಾದ ವಿದ್ಯಾರ್ಥಿ ಪ್ರವೀಣ್‌ನನ್ನು ಶಾಲೆಯಲ್ಲಿ ಅಭಿನಂದಿಸುತ್ತಿರುವುದು





ಶ್ರೀ ವಿವೇಕಾನಂದ ವಿದ್ಯಾ ಕೇಂದ್ರ ಹೊಸಕೋಟೆ ಶಾಲೆಯಲ್ಲಿ ಪ್ರಿಕೆಜಿಯಿಂದ ಎಸ್.ಎಸ್.ಎಲ್.ಸಿ.ವರೆಗೆ ವಿದ್ಯಾಭ್ಯಾಸ ಮಾಡಿದ ನೀತ ಆರ್. ಹೆಗಡೆ ವಿದ್ಯಾರ್ಥಿನಿ ಆರ್.ವಿ. ಇಂಜಿನಿಯರಿಂಗ್ ಕಾಲೇಜು ಬೆಂಗಳೂರು. 2020–21 ನೇ ಸಾಲಿನಲ್ಲಿ ಕೆಮಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಚಿನ್ನದ ಪದಕದೊಂದಿಗೆ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಈ ವಿದ್ಯಾರ್ಥಿನಿಗೆ ಶ್ರೀ ಮಂಗಳ ಶಿಕ್ಷಣ ಸಮಿತಿಯ ಪರವಾಗಿ ಅಭಿನಂದನೆಗಳು.




ಕೆಮಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಚಿನ್ನದ ಪದಕ ಪಡೆದ ನೀತಾ ಆರ್. ಹೆಗಡೆ

## ಬೈಠಕ್

ದಿನಾಂಕ 05-03-2022 ರಂದು ಶ್ರೀ ಮಂಗಳ ಶಿಕ್ಷಣ ಸಮಿತಿಯು ಎಲ್ಲಾ ಶಾಲಾ ಸ್ಥಾನೀಯ ಸಮಿತಿಯ ಪದಾಧಿಕಾರಿಗಳಿಗೆ ರಾಷ್ಟ್ರೀಯ ಸ್ವಯಂ ಸಂಘದ ಹಿರಿಯರಿಂದ ಚೈತನ್ಯ ತುಂಬುವ ಹಿತ ದೃಷ್ಟಿಯಿಂದ "ಕೇಶವ ಕೃಪ" ಶಂಕರಪುರ, ಬೆಂಗಳೂರು. ಇಲ್ಲಿ ಕರ್ನಾಟಕ ದಕ್ಷಿಣ ಪ್ರಾಂತ ಪ್ರಚಾರಕರಾದ ಶ್ರೀಯುತ ಗುರುಪ್ರಸಾದ್‌ರವರು ಮಾರ್ಗದರ್ಶನ ಮಾಡಿದರು. ಒಟ್ಟು 38 ಸದಸ್ಯರು ಭಾಗವಹಿಸಿದ್ದರು.



ಶ್ರೀ ಗುರುಪ್ರಸಾದ್ ಮತ್ತು ಶ್ರೀ ಗಣಪತಿ ಹೆಗಡೆ ರವರು ಬೈಠಕ್ ನಡಸುತ್ತಿರುವುದು



ಬೈಠಕ್‌ನಲ್ಲಿ ಪಾಲ್ಗೊಂಡ ಶ್ರೀ ಮಂಗಳ ಶಿಕ್ಷಣ ಸಮಿತಿಯ ಸದಸ್ಯರು





## ಗಾನ ಕಲಾ ವೈಭವ

ಶ್ರೀ ಮಂಗಳ ಶಿಕ್ಷಣ ಸಮಿತಿಯು ದಿನಾಂಕ 07-04-2022 ರಂದು ಮಂಗಳ ವಿದ್ಯಾ ಮಂದಿರ ಯಲಹಂಕ ಶಾಲೆಯಲ್ಲಿ ಶ್ರೀ ರಾಮನವಮಿ ಪ್ರಯುಕ್ತ ಗಾನ ಕಲಾ ವೈಭವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಅಧ್ಯಕ್ಷರಾದ ಶ್ರೀ ಮಂಜುನಾಥ್ ವೈ.ಕೆ.ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸ್ವರಾದ್ ವಾದಕರು ಶ್ರೀ ಅವಿನಾಶ್ ಜೈರಾಮ್ ಹಾಗೂ ಭರತ ನಾಟ್ಯ ಕಲಾವಿದೆ ವಿದ್ವಾನ್ ಶ್ರೀಮತಿ ನಿವೇದಿತಾ ಶರ್ಮ ಇವರು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.



ಗಾನ ಕಲಾ ವೈಭವ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ
ಅಧ್ಯಕರಾದ ಶ್ರೀ ವೈ.ಕೆ. ಮಂಜುನಾಥ್‌ರವರು



ಕಾರ್ಯಕ್ರಮದಲ್ಲಿ ಭರತ ನಾಟ್ಯ ಪ್ರದರ್ಶನ



ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಮಿತಿಯ ಪದಾಧಿಕಾರಿಗಳು ಮತ್ತು ಮುಖ್ಯ ಶಿಕ್ಷಕರು





## ವರ್ಷಾಂತ್ಯ ಅವಲೋಕನ ಬೈಠಕ್

ಶ್ರೀ ಮಂಗಳ ಶಿಕ್ಷಣ ಸಮಿತಿಯು ನಡೆಸುತ್ತಿರುವ ಎಲ್ಲಾ ಶಾಲೆಗಳ ಆಡಳಿತ ಮಂಡಳಿ ಸದಸ್ಯರಿಗೆ ಹಾಗೂ ಮುಖ್ಯೋಪಾಧ್ಯಾಯರಿಗೆ ರಾಷ್ಟ್ರೀಯ ದೃಷ್ಟಿಕೋನ ಮತ್ತು ಚೈತನ್ಯ ತುಂಬುವ ಹಿತದೃಷ್ಟಿಯಿಂದ ಹಿರಿಯರಿಂದ ಮಾರ್ಗದರ್ಶನ ಮತ್ತು ವಿಚಾರ ವಿನಿಮಯ ಅವಲೋಕನ ಬೈಠಕ್ ಅನ್ನು ದಿನಾಂಕ 10-04-2022 ರಂದು "ಆರೋವೇದ" ಯೇಡುಮಡು, ಕನಕಪುರ ರಸ್ತೆ, ಬೆಂಗಳೂರು. ಇಲ್ಲಿ ಆಯೋಜಿಸಲಾಯಿತು. ಈ ಬೈಠಕ್‌ನಲ್ಲಿ ಶ್ರೀ ಉಮೇಶ್ ಪ್ರಾಂತ ಸಂಘಟನಾ ಕಾರ್ಯದರ್ಶಿ, ವಿದ್ಯಾಭಾರತಿ ಕರ್ನಾಟಕ ಇವರು ಭಾಗವಹಿಸಿದ್ದರು. ಮುಖ್ಯ ಶಿಕ್ಷಕರು 2021-22 ನೇ ಸಾಲಿನ ಶಾಲಾ ಚಟುವಟಿಕೆಗಳ ಸಂಕ್ಷಿಪ್ತ ವರದಿಯನ್ನು ಪಿ.ಪಿ.ಟಿ. ಮುಖಾಂತರ ಮಂಡಿಸಿದರು. ಒಟ್ಟು 42 ಜಿಲ್ಲಾ ಮತ್ತು ಸ್ಥಾನೀಯ ಸಮಿತಿ ಸದಸ್ಯರು ಹಾಗೂ ಮುಖ್ಯ ಶಿಕ್ಷಕರು ಭಾಗವಹಿಸಿದ್ದರು.



ಶ್ರೀ ಉಮೇಶ್ ಮತ್ತು ಅಧ್ಯಕ್ಷರಾದ ಶ್ರೀ ವೈ.ಕೆ. ಮಂಜುನಾಥ್ ಬೈಠಕ್‌ನಲ್ಲಿ ಉಪಸ್ಥಿತರಿದ್ದರು



ಸಮಿತಿಯ ಪದಾಧಿಕಾರಿಗಳು ಹಾಗು ಮುಖ್ಯೋಪಾಧ್ಯಾಯರು

ॐ

# ಅರ್ಪಣೆ



ಸ್ವರ್ಗೀಯ **ಅಜಿತ್‌ಕುಮಾರ್**

ನಿರ್ದೇಶಕರು, ಹಿಂದೂ ಸೇವಾ ಪ್ರತಿಷ್ಠಾನ

ಪ್ರೇರಕರು, ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ)



# ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ)

## 2021–22ನೇ ಸಾಲಿನ ಎಸ್.ಎಸ್.ಎಲ್.ಸಿ. ಪ್ರತಿಭಾನ್ವಿತ ವಿದ್ಯಾರ್ಥಿಗಳು



ಶಿಲ್ಪ



ಚಂದನ ಆರ್



ಪುಷ್ಪ ಆರ್.



ಅಂಜಲಿ ಹೆಚ್.ಎಸ್.



ಅಮೃತ



ವರುಣ್ ಡಿ.



ರೋಹನ್ ಪಿ.



ಭವ್ಯ ಕೆ.



ಹರ್ಷಿತ ಆರ್.



ಅಂಜನ್ ಶೆಟ್ಟಿ ಸಿ.



ನಿವ್ಯ

## ನಿಮ್ಮ ಭವಿಷ್ಯ ಉಜ್ವಲವಾಗಿರಲಿ, ಅಭಿನಂದನೆಗಳು

* ಉಚ್ಚಾರ ಶುದ್ಧಿ, ವಿಚಾರ ಶುದ್ಧಿ, ಆಚಾರ ಶುದ್ಧಿ ಇವು ಮೂರು ಮನುಷ್ಯನ ಮನುಷ್ಯತ್ವವನ್ನು ಮೇಲೆತ್ತಿ ಬೆಳೆಸುವ ಗುಣಗಳು.

– ಜಿ.ಪಿ. ರಾಜರತ್ನಂ